# ರಾಮನ ಪ್ರಾಣ ಉಳಿಸಿದ ಭೀಮ

■ ದೀಪಶ್ರೀ ಎಸ್, ಕೂಡ್ಲಿಗಿ
ಕಲೆ: ಸಂತೋಷ್ ಸಸಿಹಿತ್ಲು



ಚಂದ್ರಾಪುರ ಎಂಬ ಪುಟ್ಟ ಊರಿನಲ್ಲಿ ರಾಮ ಎಂಬ ಯುವಕ ವಾಸವಾಗಿದ್ದ. ರಾಮು, ತಂದೆ ತಾಯಿ ಇಲ್ಲದ ಅನಾಥ. ಆದರೆ ಒಳ್ಳೆಯ ಆಸ್ತಿಪಾಸ್ತಿ ಇದ್ದಿದ್ದರಿಂದ ಹಣಕಾಸಿನ ದೃಷ್ಟಿಯಿಂದ ಒಳ್ಳೆಯ ಸ್ಥಿತಿವಂತನಾಗಿದ್ದ. ತನ್ನ ಸನ್ನಡತೆಯಿಂದ ಊರಿಗೇ ಮಗನಂತೆ ಆಗಿದ್ದರಿಂದ ಹಳ್ಳಿಯ ಎಲ್ಲರ ಪ್ರೀತಿ ಅವನಿಗೆ ಸಿಕ್ಕಿತು. ರಾಮ ಊರಿನವರಿಗೆಲ್ಲ ಅಚ್ಚುಮೆಚ್ಚು. ಯಾವ ಪ್ರತಿಫಲ ಬಯಸದೆ ಊರಿನವರ ಎಲ್ಲ ಕೆಲಸಗಳನ್ನು ಮಾಡಿಕೊಡುತ್ತಿದ್ದ. ಮಕ್ಕಳು ಕೇಳಿದಾಗ ಚಾಕೊಲೇಟ್, ಪೆಪ್ಪರ್‌ಮೆಂಟು ಅಂಗಡಿಯಿಂದ ತಂದುಕೊಡುತ್ತಿದ್ದ. ಒಂದು ಪೆಪ್ಪರ್‌ಮೆಂಟು ಉಳಿದರೆ ಅದನ್ನು ಮಕ್ಕಳು ರಾಮನಿಗೆ ಕೊಡುತ್ತಿದ್ದರು. ವಯಸ್ಕರ ಮನೆಗೆಲಸ ಮಾಡಿಕೊಡುತ್ತಿದ್ದ.

ವೃದ್ಧರು ಎಲೆ, ಅಡಿಕೆ ಕೇಳಿದರೆ ಆಗಲಿ ತಂದು ಕೊಡುವೆ ಎಂದು ಅಂಗಡಿಗೆ ಓಡುತ್ತಿದ್ದ. ಒಟ್ಟಿನಲ್ಲಿ ಹಿರಿಯರು, ಮಕ್ಕಳು, ಅಸಹಾಯಕರಿಗೆ ಆಗಬೇಕಾಗಿದ್ದ ಕೆಲಸಗಳನ್ನೂ ಮಾಡುತ್ತಿದ್ದ. ಕಾರ್ಯಕ್ರಮ, ಮದುವೆ, ಸಭೆ, ಸಮಾರಂಭದ



# ಪುಟ್ಟನ ಕೊಳಲು

■ ಡಾ. ಕೆ.ಬಿ. ರಂಗಸ್ವಾಮಿ
ಕಲೆ: ಸಂತೋಷ್ ಸಸಿಹಿತ್ಲು

ಪುಟ್ಟನೊಂದು ಪುಟ್ಟ ಕೊಳಲು
ಕೊಂಡು ತಂದನು
ಕೃಷ್ಣನಂತೆ ಪೋಸು ಕೊಟ್ಟು
ಅದನು ನುಡಿಸುತ್ತಿದ್ದನು

ಕೊಳಲ ನಾದ ಹೊಮ್ಮಿಸುತ್ತಾ
ಕುಣಿಯುತ್ತಿದ್ದನು
ತೋಚಿದಂತೆ ರಾಗ ನುಡಿಸಿ
ಮೆರೆಯುತ್ತಿದ್ದನು

ತಲೆಯಲೆರಡು ಕೋಡು ಮೂಡಿ
ಎದೆಯ ಸೆಟೆಸಿ ನಡೆದನು
ಗೆಳೆಯರನ್ನು ದೂರ ಮಾಡಿ
ಒಂಟಿಯಾಗಿಬಿಟ್ಟನು

ಅದೊಂದು ದಿನ ಗೆಳೆಯನ
ಇಂಪು ಗಾನ ಕಿವಿಗೆ ಬಿತ್ತು
ಇತರೆ ಗೆಳೆಯರೆಲ್ಲಾ ಸುತ್ತ
ನೆರೆದ ದೃಶ್ಯ ಕಾಣಿಸಿತು

ಜಂಬದಮಲು ಜರ್‍ರನಿಳಿದು
ವಿನಯವಂತನಾದನು
ಗೆಳೆಯರಲ್ಲಿ ಕ್ಷಮೆಯ ಕೇಳಿ
ಬೆರೆತು ಕುಣಿದು ನಲಿದನು